**ದಿನಾಂಕಃ 06.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2ನೇ ಎದುದಾರರ ಪರ ಮಾನ್ಯ ವಕೀಲರಿಂದ.**

2ನೇ ಅರ್ಜಿದಾರ ಮತ್ತು ನಾನು ಅಪಘಾತವನ್ನು ನೋಡಿಲ್ಲ. ನನ್ನ ಗಂಡ ಚಾಲನೆ ಮಾಡುತ್ತಿದ್ದ ವಾಹನಕ್ಕೆ ಅವರೇ ಮಾಲೀಕರು. ನನ್ನ ಗಂಡನಿಗೆ ಚಾಲನಾ ಪರವಾನಗಿ ಇತ್ತು. ಅದನ್ನು ಮತ್ತು ವಾಹನದ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಆ ದಿನ ನನ್ನ ಗಂಡ ನೆಲಮಂಗಲದಿಂದ ತುಮಕೂರು ರಸ್ತೆಯ ಕಡೆಗೆ ವಿರುದ್ದ ದಿಕ್ಕಿನಲ್ಲಿ ಬರುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಗಂಡ ತಪ್ಪಾದ ಮಾರ್ಗದಿಂದ ಬರುತ್ತಿದ್ದು, ಅದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಪೊಲೀಸ್ ದಾಖಲಾತಿಗಳಲ್ಲಿ ನನ್ನ ಗಂಡ ತಪ್ಪಾದ ಮಾರ್ಗದಲ್ಲಿ ಬರುತ್ತಿದ್ದ ಬಗ್ಗೆ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಚಾಲನಾ ಪರವಾನಗಿ ಇರಲಿಲ್ಲ ಮತ್ತು ವಾಹನಕ್ಕೆ ಸೂಕ್ತ ದಾಖಲಾತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನ ಗಂಡ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ.

2ನೇ ಅರ್ಜಿದಾರರು ಐಟಿಐ ತರಬೇತಿ ಮುಗಿಸಿದ್ದು, ಯಾವುದೇ ಕೆಲಸ ಮಾಡುತ್ತಿಲ್ಲ. ನನ್ನ ಗಂಡ ಕೆಲಸ ಮಾಡುತ್ತಿದ್ದ ಕಛೇರಿಗೆ ನನ್ನ ಗಂಡನ ಮರಣದ ಬಗ್ಗೆ ಮಾಹಿತಿ ನೀಡಿರುತ್ತೇವೆ. ನನಗೆ ಪಿಂಚಣಿ ಬರುತ್ತಿದೆ ಎಂದರೆ ಸರಿ. ನನ್ನ ಗಂಡನ ಕೆಲಸವನ್ನು ಮಗನಿಗೆ ನೀಡುವಂತೆ ಅರ್ಜಿ ನೀಡಿದ್ದು, ಅದನ್ನು ಪರಿಗಣನೆಗೆ ಇಟ್ಟಿದ್ದಾರೆ. ನನ್ನ ಮಗ ಕೆಲಸ ಮಾಡುತ್ತಿದ್ದ ಎಂದರೆ ಸರಿಯಲ್ಲ. ಅಪಘಾತದಿಂದ ನಮಗೆ ಯಾವುದೇ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಅಂತ್ಯಸಂಸ್ಕಾರ ಮತ್ತು ಇತರೆ ಖರ್ಚುಗಳಿಗೆ ನಾನು ಹೇಳಿರುವಷ್ಟು ಹಣವನ್ನು ವ್ಯಯಿಸಿಲ್ಲ ಎಂದರೆ

ಸರಿಯಲ್ಲ. ನಮ್ಮ ಕುಟುಂಬದ ಪಡಿತರ ಚೀಟಿ ಇಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**